ಮುಂತಾದ ಗ್ರಾಮಗಳ ಕೇಂದ್ರ ಮಾಣಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯವರು ಉನ್ನತ ವ್ಯಾಸಂಗಕ್ಕೆ ತೆರಳಿದ್ದು, ಪ್ರಕೃತ ವೈದ್ಯಾಧಿಕಾರಿಗಳು ಬಿಟ್ಟದಿಂದ ಸುಮಾರು 20 ಕಿ.ಮೀ. ದೂರದಿಂದ ಬರುತ್ತಿದ್ದು, ದಿನನಿತ್ಯ ಬರುವ ಸುಮಾರು 200ಕ್ಕಿಂತಲೂ ಮಿಕ್ಕ ರೋಗಿಗಳಿಗೆ ತೊಂದರೆಯಾಗುತ್ತಿದ್ದು ಮಲೇರಿಯಾ ಪೀಡಿತವಾದ ಈ ಭಾಗಕ್ಕೆ ತಕ್ಷಣ ವೈದ್ಯಾಧಿಕಾರಿಯನ್ನು ನೇಮಕ ಮಾಡಬೇಕೆಂದು ಮಾನ್ಯ ಆರೋಗ್ಯ ಸಚಿವರನ್ನು ಈ ಮೂಲಕ ಒತ್ತಾಯಪಡಿಸುತ್ತೇನೆ.

ಶ್ರೀ ಪೆಜ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಮಾಣಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ, ಡಾ: ಬಿ.ಎಸ್.ನಾಗಭೂಷಣ ರಾವ್ ಇವರು ಸರ್ಕಾರದ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ: ಆಕುಕ 86 ಎಂಪಿಎಸ್ 96 ದಿನಾಂಕ : 24.5.1996ರ ಪ್ರಕಾರ ಎಂ.ಡಿ. (ಜಿ.ಎಂ) ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆ ಹೊಂದಿ, ವೈದ್ಯಕೀಯ ಕಾಲೇಜು, ಬಳ್ಳಾರಿಗೆ ತೆರಳಿರುವ ಕಾರಣ ಈ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಹುದ್ದೆಯು ದಿನಾಂಕ : 01.07.1996ರಿಂದ ಖಾಲಿ ಇರುತ್ತದೆ. ಈ ಹುದ್ದೆಗೆ ಪ್ರಾಥಮಿಕ ಆರೋಗ್ಯ ಕೇಂದ್ರ, ವಿಟ್ಲ, ಇಲ್ಲಿನ ವೈದ್ಯಾಧಿಕಾರಿಗಳನ್ನು ಹೆಚ್ಚಿನ ಪ್ರಭಾರದ ಮೇಲೆ ನೇಮಿಸಿ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ. ಈ ಖಾಲಿ ಇರುವ ಹುದ್ದೆಗೆ ಸ್ನಾತಕೋತ್ತರ ವ್ಯಾಸಂಗ ಮುಗಿಸಿ, ನೇಮಕಾತಿಗೆ ಕಾದಿರುವ ವೈಧ್ಯರಲ್ಲಿ ಒಬ್ಬರನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಮಂಗಳೂರಿನಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿಗೆ ಲಿಫ್ಟ್ ಸೌಕರ್ಯ.

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿಯು ನೂತನವಾಗಿ ನಿರ್ಮಿಸಿದ್ದು, ಇದರಲ್ಲಿ ಮೂರು ಮಹಡಿಗಳಿರುವುದು. ಕಛೇರಿಯಲ್ಲಿ ತಾಲ್ಲೂಕು ಕಛೇರಿ, ಆಹಾರ ಇಲಾಖಾ ಕಛೇರಿಗಳು, ಚುನಾವಣಾ ಕಛೇರಿ, ಅಸಿಸ್ಟೆಂಟ್ ಕಮೀಷನರ್ ಕಛೇರಿ, ಕಂದಾಯ ಇಲಾಖೆಯ ಇತರ ವಿವಿಧ ಕಛೇರಿಗಳು ಇದ್ದು, ಶ್ರೀಸಾಮಾನ್ಯರು ದಿನವಹಿ ಭೇಟಿ ಮಾಡಬೇಕಾದ ಹಲವಾರು ಸರಕಾರಿ ಕಛೇರಿಗಳಿವೆ. ಜಿಲ್ಲಾಧಿಕಾರಿಗಳ ಕಛೇರಿ, ಮೂರನೆ ಮಹಡಿಯಲ್ಲಿರುವುದು. ದಿನ ನಿತ್ಯ ಜಿಲ್ಲೆಯ ದೂರ ದೂರದ ಊರುಗಳಿಂದ ಸಾವಿರಾರು ಜನರು ವಿಶೇಷವಾಗಿ ವೃದ್ಧರು, ಮಹಿಳೆಯರು, ಅಂಗವಿಕಲರು, ಅನಾರೋಗ್ಯ ಪೀಡಿತ ಜನರು, ದಿನನಿತ್ಯ ಅಥವಾ ದಿನದಲ್ಲಿ ಹಲವಾರು ಬಾರಿ ಈ ಕಛೇರಿಗಳಲ್ಲಿ ಅಲೆದಾಡುವ ಸಂದರ್ಭಗಳಲ್ಲಿ ಮಹಡಿಗಳನ್ನು ಏರುವಲ್ಲಿ ತೊಂದರೆಯನ್ನು ಅನುಭವಿಸುತ್ತಿರುವರು. ಅಕಸ್ಮಾತ್ ಎದುರಿಗೆ ಜನಪ್ರತಿನಿಧಿಗಳು, ವಿಶೇಷವಾಗಿ ಶಾಸಕರು ಸಿಕ್ಕಿದಾಗ ತಮ್ಮ ಸಮಸ್ಯೆಗಳನ್ನು ಮತ್ತು ತೊಂದರೆಗಳನ್ನು ಆಗ್ರಹಪೂರ್ವಕವಾಗಿ ವಿನಂತಿಸುತ್ತಿರುವರು. ಆದುದರಿಂದ ಮಂಗಳೂರಿನಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿಗೆ ಒಂದು ಲಿಫ್ಟ್

ಸೌಕರ್ಯವನ್ನು ಶೀಘ್ರದಲ್ಲೇ ವ್ಯವಸ್ಥೆ ಮಾಡಿ ಕೊಡಬೇಕಾಗಿ ರಾಜ್ಯ ಸರಕಾರವನ್ನು ಈ ಮೂಲಕ ಒತ್ತಾಯಪಡಿಸುತ್ತೇನೆ.

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಲಿಫ್ಟ್‌ನ ಅವಶ್ಯಕತೆ ಇದೆಯೆಂದು ಮಾನ್ಯ ಶಾಸಕರು ಪ್ರಸ್ತಾಪಿಸಿರುತ್ತಾರೆ. ಈ ವಿಷಯದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಲಿಫ್ಟ್‌ನ ಅವಶ್ಯಕತೆ ಬಹಳವಾಗಿದ್ದು, ಈ ಲಿಫ್ಟನ್ನು ಅಳವಡಿಸಲು ಲೋಕೋಪಯೋಗಿ ಇಲಾಖೆಗೆ ಕೋರಿಕೆಯನ್ನು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಈಗಾಗಲೇ ಕಳುಹಿಸಿರುತ್ತಾರೆ. ಜಿಲ್ಲಾಧಿಕಾರಿಗಳ ಕಛೇರಿಯ ಕಟ್ಟಡವು ಲೋಕೋಪಯೋಗಿ ಇಲಾಖೆಯ ನಿರ್ವಹಣೆಗೆ ಒಳಪಟ್ಟಿದ್ದು, ಲೋಕೋಪಯೋಗಿ ಇಲಾಖೆಯಲ್ಲಿ ಈ ಬಗ್ಗೆ ಎಸ್ಟಿಮೇಟನ್ನು (ಅಂದಾಜು ಪಟ್ಟಿ) ತಯಾರಿಸಲು ಮತ್ತು ಈ ಬಗ್ಗೆ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದು ಲಿಫ್ಟನ್ನು ಅಳವಡಿಸಲು ಕ್ರಮವನ್ನು ತೆಗೆದಕೊಳ್ಳಲಾಗುತ್ತಿದೆ. ಈ ಬಗ್ಗೆ ಮಾನ್ಯ ಶಾಸಕರು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಈ ಲಿಫ್ಟನ್ನು ಅಳವಡಿಸಲು ಕೋರಿದ್ದು ಈ ಬಗ್ಗೆ ಕೂಡಲೆ ಕ್ರಮವನ್ನು ತೆಗೆದುಕೊಳ್ಳಲು ಸೂಕ್ತ ನಿರ್ದೇಶನವನ್ನು ನೀಡಲಾಗುವುದು.

ಈ) ಆಕಸ್ಮಿಕ ಅಗ್ನಿ ಪ್ರಕೋಪದಲ್ಲಿ ಹುಲ್ಲಿನ ಬಣವಿ ಸುಟ್ಟವರಿಗೆ ಪರಿಹಾರ.

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರ):- ಮಾನ್ಯ ಅಧ್ಯಕ್ಷರೆ, ಈ ಹಿಂದೆ ಆಕಸ್ಮಿಕ ಅಗ್ನಿ ಪ್ರಕೋಪದಲ್ಲಿ ಹುಲ್ಲಿನ ಬಣವಿ ಸುಟ್ಟವರಿಗೆ ಪರಿಹಾರ ಕೊಡಲಾಗುತ್ತಿತ್ತು. ಆದರೆ ಇತ್ತೀಚೆಗೆ ಎರಡು-ಎರಡೂವರೆ ವರ್ಷಗಳಿಂದ ಕೇವಲ ಕಾಳಿನ ಬಣವಿ ಸುಟ್ಟುಕೊಂಡವರಿಗೆ ಮಾತ್ರ ಪರಿಹಾರ ಕೊಡಲಾಗುತ್ತಿದೆ. ಇದರಿಂದ ಹುಲ್ಲಿನ ಬಣವಿ ಸುಟ್ಟುಕೊಂಡವರಿಗೆ ಬಹಳಷ್ಟು ಅನ್ಯಾಯವಾಗುತ್ತಿದೆ. ಆದಕಾರಣ ಮಾನ್ಯ ಕಂದಾಯ ಸಚಿವರು ಹುಲ್ಲಿನ ಬಣವಿ ಸುಟ್ಟವರಿಗೂ ಸಹ ಪರಿಹಾರ ಒದಗಿಸುವ ಆದೇಶ ಹೊರಡಿಸಲು ವಿನಂತಿಸುತ್ತೇನೆ.

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಯು.ಬಿ.ಬಣಕಾರ್‌ರವರು ನಿಯಮ 351ರಡಿಯಲ್ಲಿ ಹುಲ್ಲಿನ ಬಣವೆಗಳು ಸುಟ್ಟ ಪ್ರಕರಣಗಳಲ್ಲಿಯೂ ಕೂಡ ಪರಿಹಾರ ನೀಡಬೇಕೆಂದು ಪ್ರಸ್ತಾಪಿಸಿದ್ದಾರೆ. ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 167 ಟಿಎನ್‌ಆರ್ 88 ದಿನಾಂಕ 6-10-94ರ ಪ್ರಕಾರ ವಿವಿಧ ಪ್ರಕಾರದ ಪ್ರಕೃತಿ ವಿಕೋಪಗಳಲ್ಲಿ ಹಾನಿಗೊಂಡ ಸಂತ್ರಸ್ಥರಿಗೆ ಪರಿಹಾರ ನೀಡಲು ಹೊರಡಿಸಿರುವ ಮಾರ್ಗಸೂಚಿ ಪ್ರಕಾರ ಸಂತ್ರಸ್ಥರ ವಾರ್ಷಿಕ ವರಮಾನ 18,000 ರೂ.ಗಳಿಂದ ಕಡಿಮೆ ಇದ್ದಲ್ಲಿ, ಧಾನ್ಯ ಸಹಿತ ಬಣವೆಗಳು ಹಾಗೂ ಧಾನ್ಯಗಳು ಆಕಸ್ಮಿಕ ಅಗ್ನಿ ಅನಾಹುತದಿಂದ ಹಾನಿಗೊಳಗಾದಲ್ಲಿ ಹಾನಿಯ ಪ್ರಮಾಣವನ್ನು ಅವಲಂಬಿಸಿ ಪ್ರತಿ ಹೆಕ್ಟೇರಿಗೆ 500 ರೂ.ಗಳವರೆಗೆ ಆದರೆ, ಗರಿಷ್ಠ 2000 ರೂ.ಗಳವರೆಗೆ ಪರಿಹಾರ ನೀಡಬಹುದಾಗಿರುತ್ತದೆ. ಧಾನ್ಯರಹಿತ ಹುಲ್ಲಿನ ಬಣವೆಗಳು ಆಕಸ್ಮಿಕ ಅಗ್ನಿ ಅನಾಹುತದಲ್ಲಿ ಪರಿಹಾರ ಕೊಡಲು ಅವಕಾಶವಿರಲಿಲ್ಲ.